**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

ಸಿಸಿ ಸಂಖ್ಯೆ 1141/2015 **CW**-14 **PW**-12

**ಸಾಕ್ಷಿಯನ್ನು ದಿಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಜಗದೀಶ್ ಕೆ |
| ತಂದೆಯ ಹೆಸರುಃ | ಕೃಷ್ಣೇಗೌಡ |
| ವಯಸ್ಸುಃ | 44 ವರ್ಷ |
| ವೃತ್ತಿಃ | ಪಿ ಐ ಆಂತರಿಕ ಭದ್ರತಾ ವಿಭಾಗ |
| ವಾಸ ಸ್ಥಳಃ | ಕೋಲಾರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಜೂನ್ 2014 ರಿಂದ ಜೂನ್ 2016 ರವರೆಗೆ ನಾನು ಚನ್ನರಾಯಪಟ್ಟಣ ನಗರ ಠಾಣೆಯುಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.06.2014 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-13 ರವರಿಂದ ಪಡೆದು ಪರಿಶೀಲಿಸಿರುತ್ತೇನೆ.

ದಿಃ 26.08.2014 ರಂದು ಠಾಣಾ ಸಿಬ್ಬಂದಿ ತಿಮ್ಮಪ್ಪರವರು ಆರೋಪಿಯನ್ನು ಠಾಣೆಗೆ ಹಾಜರುಪಡಿಸಿದ್ದು ಅವರ ಮೇಲೆ ದಸ್ತಗಿರಿ ಜರುಗಿಸಿ ನ್ಯಾಯಾಲಯದ ಮುಂದೆ ಬೆಂಗಾವಲಿನೊಂದಿಗೆ ಹಾಜರುಪಡಿಸಿರುತ್ತೇನೆ.

ದಿಃ 18.11.2014 ರಂದು ಕೆ ಎಸ್ ಆರ್ ಟಿ ಸಿ ಉಡುಪಿ ಘಟಕಕ್ಕೆ ಬಸ್ಸಿನ ಗ್ಲಾಸ್ ನ ನಷ್ಟ ಸಂಬಂಧ ಮನವಿ ನೀಡಿರುತ್ತೇನೆ.

ದಿಃ 06.04.2015 ರಂದು ಉಡುಪಿ ಘಟಕದಿಂದ ಬಂದ ಉತ್ತರವನ್ನು ಪಡೆದಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ದಿಃ 06.04.2015 ರ ಉಡುಪಿ ಘಟಕದ ಉತ್ತರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ದಿಃ 08.09.2015 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿ ಎನ್ ಎನ್ ರವರಿಂದ ಃ**

ಉಡುಪಿ ಘಟಕಕ್ಕೆ ಮನವಿ ಸಲ್ಲಿಸಿಲ್ಲ ಹಾಗೂ ಉತ್ತರ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ತನಿಖೆ ಮಾಡಿ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**